





# ಇಸ್ಪೀಟಿನ ಇಮಾರತು!

ಬ್ರಿಯಾನ್ ಬರ್ಗ್ ಎಂಬ ಈ ಹುಡುಗ 8 ವರ್ಷದವನಿದ್ದಾಗಲೇ ಇಸ್ಪೀಟ್ ಎಲೆಗಳನ್ನು ಬಳಸಿ ಮನೆ ಕಟ್ಟಲು ಶುರು ಮಾಡಿದ. ಈಗ ಈತನಿಗೆ 37 ವರ್ಷ. ಇನ್ನೂ ಆತ ಕಾರ್ಡಿನಲ್ಲಿ ಮನೆ ಕಟ್ಟುವುದನ್ನು ನಿಲ್ಲಿಸಿಲ್ಲ. ಅಮೆರಿಕದ ಟೆಕ್ಸಾಸ್ ಪ್ರಾಂತ್ಯದ ಪ್ರಖ್ಯಾತ ವಾಣಿಜ್ಯ ನಗರ ಡಲ್ಲಾಸ್‌ನ ಈ ಯುವಕ, ಜಗತ್ತಿನ ಅತ್ಯುತ್ತಮ 'ಕಾರ್ಡ್ ಮಹಲುಗಳ ನಿರ್ಮಾತೃ' ಎಂಬ ಖ್ಯಾತಿ ಪಡೆದಿದ್ದಾನೆ.

ಹಾರ್ವರ್ಡ್‌ನಲ್ಲಿ ಆರ್ಕಿಟೆಕ್ಟ್ ತರಬೇತಿ ಪಡೆದ ಬರ್ಗ್, ಇಸ್ಪೀಟಿನ ಕಾರ್ಡುಗಳಲ್ಲಿ ಅತ್ಯದ್ಭುತ ಇಮಾರತುಗಳನ್ನು ನಿರ್ಮಿಸಿ ಗಿನ್ನೆಸ್ ವಿಶ್ವದಾಖಲೆಯಲ್ಲಿ ಸೇರ್ಪಡೆಯಾಗಿದ್ದಾನೆ. ಅಷ್ಟೇ ಅಲ್ಲ, ಈಗಾಗಲೇ ಆತ ಹನ್ನೆರಡು ಬಾರಿ ತಾನೇ ನಿರ್ಮಿಸಿದ ವಿಶ್ವ ದಾಖಲೆಗಳನ್ನು ತಾನೇ ಮುರಿದಿದ್ದಾನೆ! ಆತ ನಿರ್ಮಿಸಿದ ಕಾರ್ಡಿನ ಕಟ್ಟಡಗಳ ಮಾದರಿಗಳಲ್ಲಿ 26 ಅಡಿ ಎತ್ತರದ ಡಲ್ಲಸ್ ಸ್ಕೈಲೈನ್, ನ್ಯೂಯಾರ್ಕ್ ಸ್ಕೈಲೈನ್, ಸಿಂಡ್ರೆಲ್ಲಾ ಕ್ಯಾಸೆಲ್ ಮುಂತಾದ ಸುಪ್ರಸಿದ್ಧ ಕಟ್ಟಡಗಳು ಸೇರಿವೆ.

ಇತ್ತೀಚೆಗೆ ಆತ ನಿರ್ಮಿಸಿದ ವೆನಿಶನ್ ಮಕಾ ರೆಸಾರ್ಟ್ ಹೋಟೆಲ್‌ನ ಮಾದರಿ ಆತನ ಹಿಂದಿನ ಎಲ್ಲಾ ದಾಖಲೆಗಳನ್ನು ಮೀರಿಸಿದೆ. ಅದಕ್ಕಾಗಿ ಆತ 4 ಸಾವಿರ ವಿಶೇಷ ಇಸ್ಪೀಟ್ ಸೆಟ್‌ಗಳ, 2,19,000 ಕಾರ್ಡುಗಳನ್ನು ಉಪಯೋಗಿಸಿದ್ದಾನೆ. ಈ ಮಾದರಿ ನಿರ್ಮಿಸಲು ಬರ್ಗ್ 44 ದಿನಗಳವರೆಗೆ ದುಡಿದಿದ್ದಾನೆ.

ಈತ ಇಸ್ಪೀಟ್ ಇಮಾರತುಗಳನ್ನು ಕಟ್ಟಿ ನಿಲ್ಲಿಸಲು ಫೆವಿಕಾಲ್ ನಂತಹ ಯಾವ ಅಂಟನ್ನೂ ಬಳಸುವುದಿಲ್ಲ. ಎಲ್ಲ ಕಾರ್ಡುಗಳನ್ನು ಸರಿಯಾದ ಕೋನಗಳಲ್ಲಿ ಜೋಡಿಸುವ ಮೂಲಕ, ಅವು ಬೀಳದಂತೆ, ಮೇಲಿನ ಕಾರ್ಡುಗಳ ಭಾರದಿಂದ ಮಣಿಯದಂತೆ ಹಾಗೂ ಕುಸಿಯದಂತೆ ಕೆಲವು ತಂತ್ರಗಳನ್ನು ಬಳಸುತ್ತಾನೆ.

ಈತನ ಮಾದರಿಗಳೆಲ್ಲ ತಾತ್ಕಾಲಿಕ. 'ಮೇಲೇರಿದ್ದೊಮ್ಮೆ ಕೆಳಗೆ ಇಳಿಯಲೇ ಬೇಕು' ಎಂದು ಹೇಳುವ ಈತ, ಕಟ್ಟುವದರಲ್ಲಿ ಇರುವ ಆನಂದ ಕೆಡಹುವುದರಲ್ಲಿಯೂ ಇದೆ ಎನ್ನುತ್ತಾನೆ. ಕಟ್ಟುವ–ಕೆಡವುವ ಎರಡೂ ಕ್ರಿಯೆಗಳಲ್ಲಿ ಆತ ಹೊಸ ಹೊಸ ಭೌತಶಾಸ್ತ್ರದ ಜ್ಞಾನವನ್ನು ಪಡೆದುಕೊಳ್ಳುತ್ತಾನಂತೆ. ಹಾಗೆಯೇ ಅದನ್ನು ಮುಂದಿನ ಮಾದರಿಗಳ ಸೃಷ್ಟಿಯಲ್ಲಿ ಬಳಸಿಕೊಳ್ಳುತ್ತಾನೆ.

■ಸುಭಾಸ ಯಾದವಾಡ